ನರಕದಲ್ಲಿ ಅತ್ಯಂತ ಕಡಿಮೆ ಶಿಕ್ಷೆ ಪಡೆಯುವವನೊಡನೆ ಪುನರುತ್ಥಾನ ದಿನದಂದು ಅಲ್ಲಾಹು ಕೇಳುವನು: "ಒಂದು ವೇಳೆ ಭೂಮಿಯಲ್ಲಿರುವ ಎಲ್ಲಾ ವಸ್ತುಗಳು ನಿನ್ನ ವಶದಲ್ಲಿದ್ದರೆ ನೀನು ಅವುಗಳನ್ನು (ಶಿಕ್ಷೆಯಿಂದ ಪಾರಾಗಲು) ಪರಿಹಾರವಾಗಿ ನೀಡುತ್ತಿದ್ದೆಯಾ?" ಅವನು ಹೇಳುವನು: "ಹೌದು

ಅನಸ್ ಬಿನ್ ಮಾಲಿಕ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನರಕದಲ್ಲಿ ಅತ್ಯಂತ ಕಡಿಮೆ ಶಿಕ್ಷೆ ಪಡೆಯುವವನೊಡನೆ ಪುನರುತ್ಥಾನ ದಿನದಂದು ಅಲ್ಲಾಹು ಕೇಳುವನು: "ಒಂದು ವೇಳೆ ಭೂಮಿಯಲ್ಲಿರುವ ಎಲ್ಲಾ ವಸ್ತುಗಳು ನಿನ್ನ ವಶದಲ್ಲಿದ್ದರೆ ನೀನು ಅವುಗಳನ್ನು (ಶಿಕ್ಷೆಯಿಂದ ಪಾರಾಗಲು)
ಪರಿಹಾರವಾಗಿ ನೀಡುತ್ತಿದ್ದೆಯಾ?" ಅವನು ಹೇಳುವನು: "ಹೌದು".، ಆಗ ಅಲ್ಲಾಹು ಹೇಳುವನು: "ನೀನು ಆದಮರ ಬೆನ್ನೆಲುಬಿನಲ್ಲಿದ್ದಾಗ ನಾನು ನಿನ್ನಿಂದ ಇದಕ್ಕಿಂತಲೂ ಸುಲಭವಾದುದನ್ನು ಬಯಸಿದ್ದೆ -
ಅಂದರೆ ನೀನು ನನ್ನೊಡನೆ ಯಾರನ್ನೂ ಸಹಭಾಗಿಯಾಗಿ ಮಾಡಬಾರದೆಂದು. ಆದರೆ ನೀನು ನನ್ನೊಂದಿಗೆ ಸಹಭಾಗಿತ್ವ ಮಾಡಲು ಹಟ ಹಿಡಿದು ನಿಂತೆ." [صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ತಿಳಿಸುವುದೇನೆಂದರೆ, ನರಕದಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಶಿಕ್ಷೆ ಪಡೆಯುವವನು ನರಕಕ್ಕೆ ಪ್ರವೇಶಿಸಿದ ನಂತರ ಅಲ್ಲಾಹು ಅವನೊಡನೆ ಕೇಳುವನು: "ಇಹಲೋಕ ಮತ್ತು ಅದರಲ್ಲಿರುವುದೆಲ್ಲವೂ ನಿನ್ನ ವಶದಲ್ಲಿದ್ದರೆ, ಈ ಶಿಕ್ಷೆಯಿಂದ ಪಾರಾಗಲು ನೀನು ಅವುಗಳನ್ನು ಪರಿಹಾರವಾಗಿ ನೀಡುತ್ತಿದ್ದೆಯಾ?" ಅವನು ಹೇಳುವನು: "ಹೌದು." ಆಗ ಅಲ್ಲಾಹು ಹೇಳುವನು: "ನೀನು ಆದಮರ ಬೆನ್ನೆಲುಬಿನಲ್ಲಿದ್ದಾಗ ನಾನು ನಿನ್ನಿಂದ ಇದಕ್ಕಿಂತಲೂ ಸರಳವಾದುದನ್ನು ಬಯಸಿದ್ದೆ ಮತ್ತು ಆದೇಶಿಸಿದ್ದೆ - ಅಂದರೆ ನೀನು ನನ್ನೊಡನೆ ಯಾರನ್ನೂ ಸಹಭಾಗಿಯಾಗಿ ಮಾಡಬಾರದೆಂದು. ಆದರೆ ಇಹಲೋಕಕ್ಕೆ ಬಂದ ನಂತರ ನೀನು ನನ್ನೊಂದಿಗೆ ಸಹಭಾಗಿತ್ವ ಮಾಡಲು ಹಟ ಹಿಡಿದು ನಿಂತೆ."

http://www.sunnah.global/hadeeth/kn/show/8315